## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಶ್ರೀರಂಗಪಟ್ಟಣ

## ಸಿ.ಸಿ.586/2021

| | |
|---|---|
| ಸಿ.ಡಬ್ಲ್ಯೂ ಃ | 2 |
| ಪಿ.ಡಬ್ಲ್ಯೂ ಃ | 2 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸ್ವಾಮಿ ಜೆ.ಎನ್ |
| ತಂದೆ/ ಪತಿಯ ಹೆಸರು | ಃ | ನರಸಿಂಹಮೂರ್ತಿ |
| ವಯಸ್ಸು | ಃ | 33 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಗೊಬ್ಬರಗಾಲ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 09.07.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಆರೋಪಿ ಗೊತ್ತಿರುತ್ತಾರೆ. ಸುಮಾರು 4 ವರ್ಷಗಳ ಹಿಂದೆ ನಾನು ಅರಕೆರೆಯಲ್ಲಿರುವ ರವಿಯವರ ಅಂಗಡಿಗೆ ನಾನು ಮೊಬೈಲ್ ಗೆ ಕರೆನ್ಸಿಯನ್ನು ಹಾಕಿಸಿಕೊಂಡು ವಾಪಾಸ್ಸು ನಮ್ಮ ಊರಿಗೆ ಸೈಕಲ್ ನಲ್ಲಿ ಹೋಗುತ್ತಿದ್ದೆನು. ಆ ಸಂದರ್ಬದಲ್ಲಿ ಅರಕೆರೆಯಲ್ಲಿರುವ ಮಂಜುನಾಥ ಟಾಕೀಸ್ ಹತ್ತಿರ ಸರ್ಕಾರಿ ಬಸ್ಸು ವೇಗವಾಗಿ ಬಂದು ನನ್ನ ಸೈಕಲ್ ಗೆ ಗುದ್ದಿರುತ್ತದೆ ಆಗ ನಾನು ಕೆಳಗೆ ಬಿದಿದ್ದು ನನ್ನ ಎಡಕಾಲಿನ ಚಿಪ್ಪು ಹಾಗೂ ಎಡಭಾಗದ ಪಕ್ಕೆಗೆ ಗಾಯಗಳಾಗಿರುತ್ತವೆ. ನಂತರ ನಿಂಗೇಗೌಡರು ನನ್ನನ್ನು ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಕೆ ಮಾಡಿರುತ್ತಾರೆ. ನಂತರ ದಿನಾಂಕ 07.01.2021 ರಂದು ನನ್ನ ಕಾಲಿಗೆ ಶಸ್ತ್ರ ಚಿಕಿತ್ಸೆ ಆಗಿರುತ್ತದೆ.

ನಂತರ ಆರೋಪಿಯು ಆಸ್ಪತ್ರೆಗೆ ಬಂದು ದೂರನ್ನು ನೀಡಬೇಡಿ ಪರಿಹಾರ ನೀಡುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಅವರು ಯಾವುದೇ ಪರಿಹಾರ ನೀಡಿರುವುದಿಲ್ಲ. ಈ ಘಟನೆಯ

ಸಂಬಂಧ ನನ್ನ ತಾಯಿ ದೂರನ್ನು ನೀಡಿರುತ್ತಾರೆ . ಈ ಘಟನೆಯ ಸಂಬಂಧ ನಾನು ಪೊಲೀಸರ ಮುಂದ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ಆರೋಪಿ ಊರು ಶಾಂತಿಕೊಪ್ಪಲು ಇರುತ್ತದೆ. ಶಾಂತಿಕೊಪ್ಪಲಿಗೂ ನಮ್ಮ ಊರಿಗೆ 2 ಕಿ.ಮಿ ಅಂತರ ಇರುತ್ತದೆ. ರವಿರವರ ಅಂಗಡಿ ಅರಕೆರೆಯ ಮುಖ್ಯ ರಸ್ತೆಯಲ್ಲಿ ಇರುತ್ತದೆ. ಅಲ್ಲಿ ಜನ ಓಡಾಡುತ್ತಾರೆ ಎಂದರೆ ಸರಿ. ನಾನು ರವಿರವರ ಅಂಗಡಿಗೆ ಸೈಕಲ್ ನಲ್ಲಿ ಹೋಗಿರುತ್ತೇನೆ.

ಅಪಘಾತ ಆದಾಗ ಸೈಕಲ್ ನ ಮುಂಭಾಗ ಡ್ಯಾಮೇಜ್ ಆಗಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮಂಜುನಾಥ ಟಾಕೀಸ್ ಮುಂಭಾಗ ಜನರು ಓಡಾಡುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅಪಘಾತ ಆದಾಗ ಎಷ್ಟು ಜನ ಸೇರಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಮಾರು 10 ರಿಂದ 15 ಜನ ಸೇರಿದ್ದರು ಎಂದು ನುಡಿಯುತ್ತಾರೆ. 10-15 ಜನರಲ್ಲಿ ನಿಮಗೆ ಎಲ್ಲರೂ ಪರಿಚಯ ಇರುವ ವ್ಯಕ್ತಿಗಳೇ ಎನ್ನುವ ಪ್ರಶ್ನೆಗೆ ಸಾಕ್ಷಿಯು 2 ರಿಂದ 3 ಜನರು ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ.

ಅಪಘಾತ ಆಗಿರುವ ಬಗ್ಗೆ ಪೊಲೀಸರು ನಿಮ್ಮ ಹೇಳಿಕೆ ಪಡೆದುಕೊಂಡಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಮನೆಗೆ ಬಂದು ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಬಸ್ಸು ಮಂಡ್ಯಕೊಪ್ಪಲು ಕಡೆಯಿಂದ ಬರುವ ಸಂದರ್ಬದಲ್ಲಿ ವೇಗವಾಗಿ ಬರುತ್ತಿರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ವೇಗವಾಗಿ ಬರುತ್ತಿತ್ತು ಎಂದು ನುಡಿಯುತ್ತಾರೆ. ನನಗೆ ಇಂಗ್ಲೀಷ್ ನಲ್ಲಿ ಓದಲು ಹಾಗೂ ಬರೆಯಲು ಬರುವುದಿಲ್ಲ ಆದರೆ ಸಹಿ ಮಾತ್ರ ಮಾಡುತ್ತೇನೆ. ನನಗೆ ಬಸ್ ನಂಬರ್ ಗೊತ್ತಿರುವುದಿಲ್ಲ. ನಾನು ಬಸ್ ನಂಬರನ್ನು ಪೊಲೀಸರ ಬಳಿ ಹೇಳಿರುವುದಿಲ್ಲ.

ಅಪಘಾತ ಆಗಿರುವ ವಿಚಾರವನ್ನು ನಾನು ವೈದ್ಯರ ಬಳಿ ಹೇಳಿರುತ್ತೇನೆ. ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಹೋಗುವ ಮೊದಲು ಅರಕೆರೆ ಆಸ್ಪತ್ರೆಗೆ ಹೋಗಿದ್ದು ಅವರ ಸಲಹೆಯ ಮೇರೆಗೆ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ. ಆರೋಪಿ ತಪ್ಪಿನಿಂದ ಈ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಈ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

ನಿಮ್ಮ ಊರಿನಲ್ಲಿ ನೀವು ಹೇಳಿಕೆ ನೀಡುವ ಸಂದರ್ಬದಲ್ಲಿ ಯಾರುಯಾರು ಹೇಳಿಕೆ ನೀಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಒಬ್ಬನೇ ಹೇಳಿಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಂಗೇಗೌಡರು ಮತ್ತು ನನ್ನ ತಾಯಿ ನನ್ನನ್ನು ಆಂಬ್ಯೂಲೆನ್ಸ್ ನಲ್ಲಿ ಮಂಡ್ಯದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಈ ಅಪಘಾತವು ನನ್ನ ತಪ್ಪಿನಿಂದ ಆಗಿದ್ದು, ಆರೋಪಿ ಯಾವುದೇ ಹಣ ನೀಡದೆ ಇರುವ ಕಾರಣ ಸುಳ್ಳು ಪರಿಹಾರವನ್ನು ಪಡೆಯುವ ಕಾರಣದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಆದ ಸಂದರ್ಬದಲ್ಲಿ ನಿಮ್ಮ ಊರಿನವರು ಯಾರು ಯಾರು ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಿಂಗೇಗೌಡರು ಮತ್ತು ದೇವರಾಜುರವರುಗಳು ಇದ್ದರು ಎಂದು ನುಡಿಯುತ್ತಾರೆ. ಅವರಿಬ್ಬರು ನನಗೆ ಸಂಬಂಧಿಕರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.